ಹಾಕುವುದು ಬಹಳ ಒಳ್ಳೆಯದು. ಎಸ್‌ಸ್ಪೆಷಲಿ ಟುವೀಲರ್ಸ್ ಬಹಳಷ್ಟು ಬಳಸುತ್ತಿರುವೆಡೆಯಲ್ಲಿ ಪೋಲೀಸ್‌ನವರನ್ನು ಹೆಚ್ಚಿಗೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ ಬೆಂಗಳೂರು ನಗರದ ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ತುಮಕೂರು ರೋಡ್‌ನಲ್ಲಿ ಮತ್ತು ಹೊಸೂರು ರೋಡ್‌ನಲ್ಲಿ ಇರತಕ್ಕಂಥ ಕಂಜಕ್ಷನ್‌ದಿಂದಾಗಿ ಸ್ವಲ್ಪ ತೊಂದರೆಯಾಗುತ್ತಿರತಕ್ಕಂಥದ್ದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ತುಮಕೂರು ರೋಡ್‌ನಲ್ಲಿಯೂ ಕೂಡ ನಾಲ್ಕು ಲೈನ್ ರೋಡ್ ಇದೆ. ಹೊಸೂರು ರೋಡ್‌ನಲ್ಲಿ ಒಂದು ಲೈನ್ ರೋಡ್ ಇದೆ. ಚೆಕ್‌ಪೋಸ್ಟ್ ಕೂಡ ಇವೆ. ಚೆಕ್‌ಪೋಸ್ಟ್ ಸ್ಥಳಾಂತರ ಮಾಡಲಿಕ್ಕೆ ನಾವು ಡಿಪಾರ್ಟ್‌ಮೆಂಟ್‌ನವರನ್ನು ಕೇಳಿಕೊಂಡಿದ್ದೇವೆ. ಅವರೂ ಕೂಡ ಮಾಡುತ್ತಿದ್ದಾರೆ. ನಿಜವಾಗಿಯೂ ಕೂಡ ಇವತ್ತು ಪೀಕ್‌ಹವರ್ಸ್‌ನಲ್ಲಿ ಪೋಲೀಸ್‌ನವರು ಇರುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ರೀಸೆಂಟ್ ಆಗಿ ಕ್ರಮ ತೆಗೆದುಕೊಂಡಿದ್ದೇವೆ. ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಈ ಎಲ್ಲಾ ಕಡೆ ಅಂದರೆ ಎಲ್ಲೆಲ್ಲಿ ಟ್ರಾಫಿಕ್ ಪ್ರಾಬ್ಲಮ್ ಇದೆಯೋ ಅಲ್ಲಿ ಪೋಲೀಸ್‌ನವರನ್ನು ಹಾಕಿ ನಿಯಂತ್ರಣ ಮಾಡಿದ್ದೇವೆ. ಒಟ್ಟಿನಲ್ಲಿ ಅದಕ್ಕೆ ಕೋ ಆರ್ಡಿನೇಷನ್ ಬೇಕಾಗಿದೆ. ಇದಕ್ಕೆ ನಾವು ಕಾರ್ಪೊರೇಷನ್‌ನವರನ್ನೂ ಕೂಡ ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ. ಮತ್ತು ನ್ಯಾಷನಲ್ ಹೈವೇನವರನ್ನೂ ಕೂಡ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಈಗ ರೈಟ್ಸ್‌ನವರು ಸರ್ವೆಯನ್ನು ಕಂಡೆಕ್ಟ್ ಮಾಡಿ ರಿಪೋರ್ಟ್ ಕೂಡ ಸರ್ಕಾರಕ್ಕೆ ಕೊಟ್ಟಿದ್ದಾರೆ. ಮತ್ತು ಕಾರ್ಪೊರೇಷನ್‌ಗೂ ಕೂಡ ನಾವು ರಿಕ್ವೆಸ್ಟ್ ಮಾಡಿದ್ದೇವೆ. ಬಿ.ಡಿ.ಎ. ಕೂಡ ರಿಂಗ್ ರೋಡ್ ಮಾಡುವ ಬಗ್ಗೆ ಹೇಳಿದ್ದೇವೆ. ಕಾರ್ಪೊರೇಷನ್ ಗೌವರ್ನಮೆಂಟ್ ಎಲ್ಲಾ ಕೂಡ 50 ಪರ್ಸೆಂಟ್ ಸರ್ಕಾರ ಹಣವನ್ನು ಕೊಡಬೇಕಾಗುತ್ತದೆ. ಕಾರ್ಪೊರೇಷನ್‌ಮತ್ತು ಬಿಡಿಎ ಕೂಡ ಅದನ್ನೆಲ್ಲಾ ಮಾಡಬೇಕಾಗುತ್ತದೆ. ಅದಕ್ಕೆ ಒಂದು 5 ಕೋಟಿ ಯೋಜನೆಯನ್ನು ತಯಾರು ಮಾಡಿದ್ದೇವೆ. ಮತ್ತು ಟ್ರಾಫಿಕ್ ಕಂಟ್ರೋಲ್ ಮಾಡತಕ್ಕಂಥ ರೀತಿಯಲ್ಲಿ ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗಿ ಎಲ್ಲಾ ಕಡೆಗೂ ಪೋಸ್ಟ್ ಕ್ರಿಯೇಟ್ ಮಾಡತಕ್ಕಂಥದ್ದು ಇದೆ. ರೀಸೆಂಟ್ ಆಗಿ ಸರ್ಕಾರ ಕೂಡ ಪೋಸ್ಟ್ ಕ್ರಿಯೇಟ್ ಮಾಡಿದೆ. ಈಗ ಮಾನ್ಯ ಸದಸ್ಯರು ವಿನೇನು ತೊಂದರೆಯಾಗುತ್ತಿದೆ ಎನ್ನತಕ್ಕಂಥದ್ದನ್ನು ಸರ್ಕಾರದ ಗಮನಕ್ಕೆ ತಂದಮೇಲೆ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಮತ್ತೆ ಅದಕ್ಕೆ ಇನ್ನೂ ಕೂಡ ಬಿಗಿ ಮಾಡತಕ್ಕಂಥ ಕ್ರಮ ತೆಗೆದುಕೊಳ್ಳುವ ಮಾತನ್ನೂ ಕೂಡ ಹೇಳುತ್ತೇನೆ.

ಶ್ರೀ ಕೆ. ಪರ್ಷಕುಮಾರ್ ಗೌಡ : ನಗರ ಪ್ರದೇಶಗಳಲ್ಲಿ ಸಂಚಾರಿ ಕಾಯಿದೆ ಜಾರಿಯಲ್ಲಿದೆ. ಬೆಂಗಳೂರು ನಗರದ ರಸ್ತೆಯಲ್ಲಿ ಹೋಗಬೇಕಾದರೆ ಎಡಗಡೆಯಿಂದ ಓಟರ್‌ಟೇಕ್ ಮಾಡಿಕೊಂಡು ಹೋಗುತ್ತಾರೆ. ವೆಹಿಕಲ್‌ನಲ್ಲಿ ಹೋಗಬೇಕಾದರೆ ಪ್ರಾಣ ಹೋದ ಹಾಗೆ ಆಗುತ್ತದೆ. ಇದಕ್ಕೆ ಸರ್ಕಾರದವರು ಬಿಗಿ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಎಲ್ಲಿಯವರೆಗೆ ರಿಂಗ್ ರೋಡ್‌ಗಳನ್ನು ಮಾಡುವುದಿಲ್ಲ ಅಲ್ಲಿಯವರೆಗೆ ಈ ತೊಂದರೆ ಇರುತ್ತದೆ. ಬೇರೆ ರಾಜ್ಯಗಳಲ್ಲಿ ಮಾಡಿದ್ದಾರೆ. ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಬಿ.ಡಿ.ಎ.ದಿಂದ ನಿವೇಶನಗಳ ಹಂಚಿಕೆ

2733 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳನ್ನು ಕೊಡುವ ಸಲುವಾಗಿ ಪ್ರಾಧಿಕಾರ ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಈ ಅರ್ಜಿದಾರರಿಂದ ಸ್ವೀಕರಿಸಿರುವ ಠೇವಣಿ ಹಣ ಎಷ್ಟು?

ಇ) ನಿವೇಶನಗಳನ್ನು ಹಂಚದೇ ಇರುವುದರಿಂದ ಈ ಠೇವಣಿ ಹಣವನ್ನು ವಾಪಸ್ಸು ಕೊಡುವ ವಿಚಾರ ಸರ್ಕಾರದ ಮುಂದೆ ಇದೆಯೇ?

ಈ) ಇದರ ಮೇಲೆ ಬರುತ್ತಿರುವ ಬಡ್ಡಿಯನ್ನು ಅರ್ಜಿದಾರರಿಗೆ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 86,988

ಆ) 27.54 ಕೋಟಿ ರೂಪಾಯಿಗಳು.

ಇ) ಯಾವ ಅರ್ಜಿದಾರರು ತಮ್ಮ ಠೇವಣಿ ಹಣವನ್ನು ವಾಪಸ್ಸು ಪಡೆಯಲು ಇಚ್ಛಿಸುವರೋ ಅಂತಹವರಿಗೆ ಠೇವಣಿ ಹಣವನ್ನು ವಾಪಸ್ಸು ಕೊಡಲಾಗುತ್ತದೆ.

ಈ) ಠೇವಣಿ ಹಣದ ಮೇಲೆ ಬಡ್ಡಿ ನೀಡಲು ಬಿಡಿಎ (ನಿವೇಶನ ಹಂಚಿಕೆ) ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ.

ಶ್ರೀ ಪಿ.ಜಿ. ಆರ್. ಸಿಂಧ್ಯ : ಮುಖ್ಯ ಮಂತ್ರಿಗಳು ಬಿಡಿಎಗೆ 86988 ಅರ್ಜಿಗಳು ಬಂದಿದ್ದು ಅವರೆಲ್ಲ ನಿವೇಶನಗಳನ್ನು ಪಡೆಯಬೇಕೆಂದು ಬಯಸಿದ್ದಾರೆಂದು ಉತ್ತರ ಕೊಟ್ಟಿದ್ದಾರೆ. ಎರಡನೆಯಾದಾಗಿ 27.54 ಕೋಟಿ ರೂಪಾಯಿ ಡಿಪಾಸಿಟ್ ಇದೆ ಎಂದು ಹೇಳುತ್ತಾರೆ. ಡಿಪಾಸಿಟ್ ಹಣ ಇಲ್ಲವೆಂದು ನನ್ನ ಭಾವನೆ. ಬಿಡಿ.ಎಯಲ್ಲಿ ಡಿಪಾಸಿಟ್ ಹಣ ಇದೆಯೋ ಅಥವಾ ಅಲ್ಲಿರತಕ್ಕ ನೌಕರ ವರ್ಗದವರ ಸಂಬಳ ಮತ್ತಿತರ ಖರ್ಚಿಗೆ ಕೊಟ್ಟಿದ್ದಾರೋ? ಜನರು ಹತ್ತಾರು ವರ್ಷಗಳಿಂದ ಅರ್ಜಿ ಹಾಕಿ ಕಾದಿದ್ದಾರೆ. 9 ಪರ್ಸೆಂಟ್ ಧರ್ಮದ ಬಡ್ಡಿ ಹಾಕಿದರೂ 6 ವರ್ಷಗಳಲ್ಲಿ 30 ಕೋಟಿ ರೂಪಾಯಿ ಬಿಡಿಎಗೆ ಅಪ್ಲಿಕೆಂಟ್ಸ್ ಡಿಪಾಸಿಟ್‌ನಿಂದ ಬಡ್ಡಿ ಬಂದಿದೆ. ಈಗ ಬಿಡಿಎ ಆಕ್ಟ್‌ನಲ್ಲಿ ಠೇವಣಿ ಹಣಕ್ಕೆ ಬಡ್ಡಿ ಕೊಡುವುದಕ್ಕೆ ಪ್ರಾವಿಷನ್ ಇಲ್ಲವೆಂದು ಹೇಳುತ್ತಿದ್ದಾರೆ. ಆ ಆಕ್ಟ್‌ನ್ನು ಅಮೆಂಡ್‌ಮೆಂಟ್ ಮಾಡಿ, ಹತ್ತಾರು ವರ್ಷಗಳಿಂದ ಏನು ಹಣ ಕಟ್ಟಿ ಕಾದಿದ್ದಾರೆ ಅವರಿಗೆ ಬಡ್ಡಿ ಕೊಡಿ. ಇಲ್ಲದಿದ್ದರೆ ಬಿಡಿಎಯನ್ನು ವಿಸರ್ಜನೆ ಮಾಡಿಸೋಣ. ಸಾವಿರಾರು ರೂಪಾಯಿ ಹಣ ಕಟ್ಟಿ ಇಂಟರೆಸ್ಟ್ ಆದರೂ ಬೇಡವೆ? ಬ್ಯಾಂಕಿನಲ್ಲಿಟ್ಟಿದ್ದರೆ ಇಂಟರೆಸ್ಟ್ ಬರುತ್ತಿತ್ತು. ಕಳೆದ ಅಧಿವೇಶನದಲ್ಲಿಯೂ ಕೂಡ ಈ ಬಗ್ಗೆ ಪ್ರಸ್ತಾಪ ಮಾಡಿದ್ದೆ. 86 ಸಾವಿರ ಅರ್ಜಿಗಳು ಏನಿವೆ ಅವನ್ನು ಯಾವಾಗ ವಿಲೇವಾರಿ ಮಾಡುತ್ತೀರಿ. ಸೈಟು ಬೇಡ ಅಂದವರಿಗೆ ಡಿಪಾಸಿಟ್ ಅನ್ನು ವಾಪಸ್ಸು ಕೊಡುತ್ತೇವೆಂದು ಹೇಳುತ್ತಿದ್ದೀರಿ. ಡಿಪಾಸಿಟ್ ವಾಪಸ್ಸು ಕೊಡಲು ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವೆ?

ಶ್ರೀ ಎಸ್. ಬಂಗಾರಪ್ಪ : ಎರಡು ಮೂರು ಪ್ರಶ್ನೆಗಳನ್ನು ಮಾನ್ಯ ವಿರೋಧ ಪಕ್ಷದ ಉಪನಾಯಕರು ಕೇಳಿದ್ದಾರೆ. ಈಗಿರತಕ್ಕ 86 ಸಾವಿರ ಅರ್ಜಿಗಳು ಏನಿವೆ ಇವಕ್ಕೆ ಯಾವಾಗ ಸೈಟುಗಳನ್ನು ಕೊಡುತ್ತೀರೆಂದು ಕೇಳಿದ್ದಾರೆ. ಈ ವಿಚಾರದಲ್ಲಿ ಅಕ್ವಿಜಿಷನ್ ಮಾಡಿದಂತಹ ಸಂದರ್ಭದಲ್ಲಿ ಹೈಕೋರ್ಟಿಗೆ ಹೋಗಿ ತಡೆಯಾಜ್ಞೆ ತರಲಾಗಿ ತಡವಾಯಿತು ಎಂಬುದು ತಮಗೆಲ್ಲ ಗೊತ್ತಿರತಕ್ಕದ್ದು. ಅನಂತರ ಕಾನೂನು ಇಲಾಖೆಯ ಮುಖಾಂತರ ಸ್ಟೇ ವಗೈರೆ ಏನಿತ್ತು ಅದನ್ನು ವೆಕೇಟ್ ಮಾಡುವುದಕ್ಕೆ ಸಾಕಷ್ಟು

ಕಾರ್ಯಕ್ರಮ ಹಾಕಿ ಸಾಕಷ್ಟು ಕೇಸುಗಳಲ್ಲಿ ತಡೆಯಾಜ್ಞೆ ತೆಗೆದುಹಾಕಿದ್ದೇವೆ. ಕೋರ್ಟಿಗೆ ಹೋದಮೇಲೆ ಹೇಗೆ ತಡವಾಗುತ್ತದೆಂದು ತಮಗೆ ಗೊತ್ತಿದೆ. ಬಿಡಿಎಯಲ್ಲಿ ಈಗ ಏನು ಅರ್ಜಿಗಳು ಇವೆ ಅವರಿಗೆಲ್ಲ ಶೀಘ್ರವಾಗಿ ನಿವೇಶನಗಳನ್ನು ಕೊಡುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ತಡೆಯಾಜ್ಞೆ ತೆರವಾದ ಮೇಲೆ ಸಾಧ್ಯವಿದೆ ಎಂದು ನನ್ನ ಅಭಿಪ್ರಾಯ. ಬಡ್ಡಿ ಕೊಡತಕ್ಕ ವಿಚಾರದಲ್ಲಿ ಹೇಳಿದ್ದೀರಿ ಮತ್ತು ಆಕ್ಟ್ ಅನ್ನು ಅಮೆಂಡ್ ಮಾಡಿ ಎಂದು ಕೂಡ ಹೇಳಿದ್ದೀರಿ. ಅಲ್ಲನೋ ಪ್ರಾಫಿಟ್ ನೋ ಲಾಸ್ ಬೇಸಿಸ್ ಮೇಲೆ ವ್ಯವಹಾರ ಮಾಡತಕ್ಕದ್ದು. ನಾವು ಬಡ್ಡಿ ಕೊಡತಕ್ಕ ವಿಚಾರ ಮಾಡಿದರೆ ಆ ಸೈಟಿನ ಕಾಸ್ಟ್‌ಗೆ ಬಡ್ಡಿಯನ್ನು ಸೇರಿಸತಕ್ಕ ಸಂದರ್ಭ ಬರುತ್ತದೆ. It will be a costly affair....

ಅದಕ್ಕಾಗಿ ಬಡ್ಡಿ ಕೊಡತಕ್ಕ ವಿಚಾರ ಬೇಡ ಎಂದು ಮಾಡಿದ್ದೇವೆ. ಮಾರ್ಕೆಟ್ ವ್ಯಾಲ್ಯು ಲೆಕ್ಕ ಹಾಕಿದರೆ ನಾವು ಕೊಡತಕ್ಕದ್ದು ಕಾಲು ಅಥವಾ ಅರ್ಧ ರೇಟಿಗೆ ಕೊಟ್ಟ ಹಾಗೆ ಆಗುತ್ತದೆ.

ಏಕೆಂದರೆ ಆ ಒಂದು ವಿಧಾನ ಇಟ್ಟುಕೊಂಡೇ ಬಿ.ಡಿ.ಎ. ಮುಖಾಂತರ ಸೈಟು ಕೊಡುವ ವಿಚಾರ ನಾವು ಇಟ್ಟುಕೊಂಡಿದ್ದೇವೆ. ಮತ್ತೊಂದು 27 ಕೋಟಿ 54 ಲಕ್ಷ ರೂಪಾಯಿ ಏನು ಡಿಪಾಸಿಟ್ ಇದೆ ಆ ಹಣ ಸಂಬಳ ಗಿಂಬಳ ಕೊಟ್ಟುಬಿಟ್ಟಿದ್ದಾರೋ ಹಣ ಏನಾದರೂ ಆಗಿಬಿಟ್ಟಿದೆಯೋ ಏನಾಗಿದೆ ಎಂಬುದು ಮಾನ್ಯ ಸದಸ್ಯರ ಮೂರನೇ ಪ್ರಶ್ನೆ. ಹಣ ಕೊಟ್ಟಮೇಲೆ ಸಂಬಳಕ್ಕೆ ಒಂದು ವೇಳೆ ಉಪಯೋಗ ಮಾಡಿದರೂ ಕೂಡ ನಾವು ಸೈಟು ಕೊಡತಕ್ಕದ್ದು ನಿಲ್ಲಿಸುವುದಕ್ಕಾಗುವುದಿಲ್ಲ. ಇದು ತಮಗೆಲ್ಲಾ ಗೊತ್ತಿತರತಕ್ಕದ್ದು. ಆ ಡಿಪಾಸಿಟ್ ನಮಗೆ ಕೊಟ್ಟುಬಿಡಿ ಸ್ವಾಮಿ, ನಮಗೆ ಸೈಟು ಬೇಡ ಏನೂ ಬೇಡ ಅಂದುಬಿಟ್ಟರೆ ಹಣ ಕೊಡಲೇಬೇಕು. ಈಗಾಗಲೇ ಕೆಲವರು ಅದೇರೀತಿ ಕೇಳಿದ್ದಾರೆ. ಆ ರೀತಿಯಾಗಿ ಹಣ ಕೇಳಿರುವವರಿಗೆ ಹಣ ಕೊಡತಕ್ಕ ಕೆಲಸ ಬಿ.ಡಿ.ಎ. ಮುಖಾಂತರ ನಾವು ಮಾಡಿದ್ದೇವೆ. ಈಗಲೂ ಕೂಡ ಯಾರಾದರೂ ಕೇಳಿದರೆ ತೆಗೆದುಕೊಂಡು ಹೋಗಲಿ ಎಂಬುದು ಒಂದು ಅಭಿಪ್ರಾಯ. ಇದರಲ್ಲಿ ಮುಖ್ಯವಾಗಿ ಸೈಟ್ ಪಡೆಯುವ ಉದ್ದೇಶದಿಂದ ಅವರು ಹಣ ಕೊಟ್ಟಿರುವುದರಿಂದ ಸೈಟ್ ಕೊಡುವುದಕ್ಕೆ ನಮಗೂ ಕೂಡ ಸಾಧ್ಯತೆ ಈಗ ಬರುತ್ತಾ ಇದೆ. ಇಷ್ಟು ದಿವಸ ಹಣ ಇಟ್ಟು ಈಗ ಹಿಂದೆ ತೆಗೆದುಕೊಂಡರೆ ಸೈಟ್ ಇಲ್ಲದೆ ಏನು ಉಪಯೋಗ? ನಾನು ಹೇಳುವುದು ಆ ಹಣ ಅಲ್ಲೇ ಇರಲಿ. ತಪ್ಪೇನೂ ಆಗುವುದಿಲ್ಲ. ಸೈಟ್ ಅವರಿಗೆ ಕೊಡತಕ್ಕ ಕಾರ್ಯವನ್ನು ಬಿಡಿಎ ಮುಖಾಂತರ ನಾವು ಮಾಡಿಸುತ್ತೇವೆ. ಇಲ್ಲ, ಇಲ್ಲ ನಮಗೆ ಬೇಕೆ ಬೇಕು ಎಂದರೆ ತೆಗೆದುಕೊಂಡು ಹೋಗಲಿ ಇನ್ನೇನೂ ಮಾಡುವುದಕ್ಕಾಗುವುದಿಲ್ಲ. ಅದು ಅವರ ಹಣ. ಆ ಹಣ ನಮ್ಮ ಬಿ.ಡಿ.ಎ. ಹತ್ತಿರ ಇಟ್ಟುಕೊಳ್ಳುವುದಕ್ಕೆ ಬಿ.ಡಿ.ಎ.ಗೆ ಅಧಿಕಾರ ಇಲ್ಲ. ಆ ಜನ ಯಾರು ಯಾರು ಡಿಪಾಸಿಟ್ ಮಾಡಿದ್ದಾರೆ ಅದು ಅವರ ಹಣ. ಅವರ ಹಣ ಕೊಡುವುದಕ್ಕೆ ನಮ್ಮ ಹತ್ತಿರ ಹಣ ಇದೆ. ಹಿಂದಕ್ಕೆ ಬೇಕೆಬೇಕು ಎಂದರೆ ನಾವು ಆ ಹಣವನ್ನು ಕೊಟ್ಟು ಕಳುಹಿಸುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಈ ಡಿಪಾಸಿಟ್ ಮೇಲೆ ವರ್ಷಕ್ಕೆ 4 ಕೋಟಿ ರೂಪಾಯಿ ಬಡ್ಡಿ ಬಿ.ಡಿ.ಎ.ಗೆ ಬರುತ್ತದೆ. ಅಷ್ಟೊಂದು ಹಣ ಏನು ಮಾಡುತ್ತಾ ಇದ್ದೀರಿ ಎಂದು ಪಬ್ಲಿಕ್ ಕೇಳುತ್ತಾರೆ. ಬಿ.ಡಿ.ಎ.ನಲ್ಲಿ ಒಂದು ಕೆಲಸ ಮಾಡಿಸಿಕೊಳ್ಳಬೇಕು ಎಂದರೆ ಬಹಳ ಕಷ್ಟವಾಗುತ್ತದೆ. ಜನಸಾಮನ್ಯಾರ ಕೆಲಸಗಳನ್ನು ಮಾಡಿಸಿಕೊಳ್ಳಬೇಕು ಬಿ.ಡಿ.ಎ. ಆಫೀಸ್‌ನಲ್ಲಿ ಎಂದರೆ ಕೆಳಮಟ್ಟದಲ್ಲಿ ಹೋಗಬೇಕು

ಎಂದರೆ ಯಾರೂ ಸಿಗುವುದಿಲ್ಲ. ಕಮಿಷನರ್, ಛೇರ್ಮನ್ನರು ಸಿಗುತ್ತಾರೆ, ಉಳಿದವರು ನೋಡಬೇಕು ಮಾತನಾಡಬೇಕು ಎಂದರೂ ಸಿಗುವುದಿಲ್ಲ. ಬಹಳ ಪೆರಾಮೆಂಟ್ ಇದೆ. ನನಗೆ ಬೇಡಿಕೆಗಳ ಬಗ್ಗೆ ಮಾತನಾಡುವಾಗ ಅದರ ಬಗ್ಗೆ ಮಾತನಾಡುವುದಕ್ಕಾಗಲಿಲ್ಲ. ಬೇರೆ ಯಾವುದಾದರೂ ಸಂದರ್ಭದಲ್ಲಿ ಮಾತನಾಡುತ್ತೇನೆ. ನಾನು ಹೋದ ಸಾರಿಯೂ ಇದನ್ನು ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಿದ್ದೇನೆ. ಕೊನೇ ಪಕ್ಷ ಇಷ್ಟಾದರೂ ಮೇಲಿ ಸ್ವಾಮಿ. ಹತ್ತು ವರ್ಷದಿಂದ ಹಣ ಕಟ್ಟಿದ್ದಾರೆ. ಆರು ತಿಂಗಳೋ ಎರಡು ವರ್ಷವೋ ಮೂರು ವರ್ಷವೋ ಆದರೆ ಪರ್ವಾಗಿಲ್ಲ. 88 ಸಾವಿರ ಅಪ್ಲಿಕೆಂಟ್ಸ್‌ಗೆ ಮುಂದಿನ ಎರಡು ವರ್ಷದಲ್ಲಿ ಎಲ್ಲರಿಗೂ ಸೈಟ್ ಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಅವರು ಕೇಳದಿದ್ದರೂ ಹೇಳುತ್ತೇನೆ. ಒಟ್ಟು ಹಣದಲ್ಲಿ 3.28 ಕೋಟಿ ರೂಪಾಯಿಗಳನ್ನು ಈಗಾಗಲೇ ವಾಪಸ್ ಕೊಟ್ಟಿದೆ. ಎರಡು ವರ್ಷದಲ್ಲಿ ಸೈಟು ಕೊಡುತ್ತೀರಾ ಎಂದು ಕೇಳಿದ್ದಾರೆ. ನಮ್ಮ ಆಸೆಯೇ ಅದು. ಒಂದು ವರ್ಷದಲ್ಲಿ ಕೊಟ್ಟು ಮುಗಿಸಬೇಕು ಅದನ್ನು ಎರಡು ವರ್ಷದವರೆಗೂ ಹೋಗಬಾರದು ಎನ್ನತಕ್ಕದ್ದು. ಬೇರೆ ಕಾರಣದಿಂದ ಕೋರ್ಟ್ ವ್ಯವಹಾರ ಯಾರಾದರೂ ಏನಾದರೂ ಮಾಡಿದರೆ ಮಾತ್ರ ತಡವಾಗುತ್ತದೆಯೇ ವಿನಹ ಬಿ.ಡಿ.ಎ. ವತಿಯಿಂದ ತಡವಾಗಬಾರದು. ಹೀಗಿರುವಾಗ ತಮ್ಮ ಅಭಿಪ್ರಾಯ ಇಟ್ಟುಕೊಂಡೇ ನಾವು ಕೊಡತಕ್ಕ ಕೆಲಸ ಕಾರ್ಯವನ್ನು ಮಾಡುತ್ತೇವೆ.

ಶ್ರೀ ಕೆ.ಎಚ್. ರಂಗನಾಥ್ : ಸ್ವಾಮಿ, ಸುಮಾರು 88 ಸಾವಿರ ಅರ್ಜಿಗಳು ಹಾಲಿ ಇವೆ ಎಂದು ಸರ್ಕಾರ ಉತ್ತರ ಒದಗಿಸಿದೆ. ಬಿ.ಡಿ.ಎ. ಹತ್ತಿರ ಹಾಲಿ ಸೈಟು ಕೊಡುವುದಕ್ಕೆ ಎಷ್ಟು ಸೈಟುಗಳಿವೆ ? ಈ 88 ಸಾವಿರ ಅರ್ಜಿದಾರರಲ್ಲಿ ಎಷ್ಟು ಅರ್ಜಿಗಳಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ನಾನು ಈಗಾಗಲೇ ತಮ್ಮ ಪ್ರಶ್ನೆಗೆ ಮೂಲತಃ ಉತ್ತರ ಕೊಟ್ಟಿದ್ದೇನೆ ಎಂದು ಭಾವಿಸಿದ್ದೇನೆ. ಅನೇಕ ವಿಚಾರಗಳಲ್ಲಿ ಕೋರ್ಟಿಗೆ ಹೋಗಿ ಸ್ಟೇ ಮಾಡಿಸಿರುವುದರಿಂದ ತಕ್ಷಣ ಇಷ್ಟೇ ಸೈಟಿದೆ ಅರ್ಜಿದಾರರಿಗೆ ಕೊಡುವುದಕ್ಕೆ ಎಂದು ಹೇಳುವುದು ಬಹಳ ಕಷ್ಟವಾಗುತ್ತದೆ. ಹೈಕೋರ್ಟಿನ ತಡೆಯಾಜ್ಞೆ ತೆರವಾದ ಮೇಲೆ ಎಷ್ಟಿದೆ ನೋಡಿ ಅಂಕಿಅಂಶದ ವಿವರಗಳನ್ನು ಒದಗಿಸಿಕೊಡುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಹಿಂದಿನ ಅಧಿವೇಶನದಲ್ಲಿ ವರ್ಷಕ್ಕೆ 10 ಸಾವಿರ ಸೈಟುಗಳನ್ನು ಬಿಡಿಎ ವತಿಯಿಂದ ಕೊಡುತ್ತೇವೆಂದು ರಿಪ್ಲೈ ಕೊಟ್ಟಿದ್ದಿರಿ. ಅದು ರೆಕಾರ್ಡ್‌ನಲ್ಲಿದೆ. ವರ್ಷಕ್ಕೆ 10 ಸಾವಿರ ಸೈಟು ಕೊಡುತ್ತೇವೆ ಎಂದರೆ 88 ಸಾವಿರ ಜನರು ರಿಜಿಸ್ಟರ್ ಮಾಡಿ ವೈಟಿಂಗ್ ಲಿಸ್ಟ್‌ನಲ್ಲಿ ಏನು ಕಾಯುತ್ತಿದ್ದಾರೆ ಅವರಿಗೆಲ್ಲಾ ಕೊಟ್ಟು ಮುಗಿಸುವುದಕ್ಕೆ 9 ವರ್ಷಗಳಾದರೂ ಬೇಕಾಗುತ್ತದೆ. ಈ ವರ್ಷದವರೆಗೂ ಸನ್ಮಾನ್ಯ ಪಿ.ಜಿ.ಆರ್. ಸಿಂಧ್ಯ ಅವರು ಹೇಳಿದಹಾಗೆ ವರ್ಷಕ್ಕೆ 4ಕೋಟಿ ರೂಪಾಯಿನಂತೆ ಬಡ್ಡಿ ವಸೂಲು ಮಾಡಿದರೆ ಸುಮಾರು 40 ಕೋಟಿ ರೂಪಾಯಿಗಳು ಬರೀ ಬಡ್ಡಿಯಲ್ಲೇ ಬರುತ್ತದೆ. ಅದನ್ನು ಬರೀ ಅವರಿಗೆ ತೋರಿಸಿಕೊಂಡು ಕುಳಿತರೆ ಅದು ಬ್ರೀಚ್ ಆಫ್ ಟ್ರಸ್ಟ್ ಆಗುತ್ತದೆ. ಯಾವುದಾದರೂ ಒಂದು ನಿರ್ಧಾರ ಮಾಡಿ. ಸೈಟು ಕೊಡಬೇಕು ಇಲ್ಲವೇ ಹಣ ಕೊಡಬೇಕು. ವರ್ಷಕ್ಕೆ ಬರೀ 10 ಸಾವಿರ ಸೈಟು ಕೊಡುವಹಾಗಿದ್ದರೆ ಉಳಿದ 76 ಸಾವಿರ ಜನರಿಗೆ ಹಣ ವಾಪಸ್ ಕೊಡಬೇಕಾಗುತ್ತದೆ. ಬಡ್ಡಿ ಕೊಡಬೇಕು ಇಲ್ಲವೇ ಏನಾದರೂ ಒಂದು ಕಾರ್ಯಕ್ರಮ ಇಟ್ಟುಕೊಂಡು ಇದನ್ನು ಫೈನಲೈಸ್ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ನಿವೇಶನ ರಹಿತರು ಯಾರಿದ್ದಾರೆ ಅವರಿಗೆ ನಿವೇಶನ ಕೊಡುವ ಸದುದ್ದೇಶದಿಂದ ಬಿಡಿಎ ಹುಟ್ಟಿಬಂದಿದೆ. ಈ ಉದ್ದೇಶಕ್ಕೆ ಹಲವಾರು ಅಡೆತಡೆಗಳು ಹಲವಾರು ವರ್ಷಗಳಿಂದ ಬಂದಿದೆ ಎಂಬುದು ವಾಸ್ತವಾಂಶ ಕೂಡ ಹೌದು. ಬಿಡಿಎ ಬೇಡ ಎನ್ನುವುದಾದರೆ ನಾಳೆ ಮತ್ತೊಂದು ಆಲ್ಟರ್ ನೇಟಿವ್ ಆಗಿ ಮತ್ತೊಂದು ಏನಾದರೂ ವಿಚಾರ ಮಾಡಬೇಕಾಗುತ್ತದೆ. ಆದರೆ ಅತಿ ಶೀಘ್ರವಾಗಿ ನಿವೇಶನ ಕೊಡಬೇಕೆಂಬುದೇ ನಮ್ಮ ಉದ್ದೇಶ. ಮಾನ್ಯ ರಂಗನಾಥ್‌ಜೀಯವರು ಹೇಳಿದಹಾಗೆ ಈಗ ಇರತಕ್ಕ ಜಾಗ ಎಷ್ಟು ಇದೆ ಅಷ್ಟನ್ನು ಕೊಡುವ ಕೆಲಸ ಪ್ರಾರಂಭ ಮಾಡೋಣ. 1988ರ ಮೊದಲ ಭಾಗದಲ್ಲಿ 3,200 ಹಾಗೂ ಡಿಸೆಂಬರ್‌ನಲ್ಲಿ 2,000 ಸೈಟು ಹೀಗೆ ಒಟ್ಟು, 5,200 ಸೈಟುಗಳ ಬಗ್ಗೆ ಹಾಕಿದ ತಕ್ಕ ಕಾರ್ಯಕ್ರಮ. ತಡೆಯಾಜ್ಞೆ ಬಂದಮೇಲೆ ಇದು ಕುಗ್ಗುತ್ತಾ ಕುಗ್ಗುತ್ತಾ ಬಂದು ಕಡಿಮೆ ಆಗಿದೆ. ನಾನೂ ಕೂಡ ಮೊನ್ನೆ ಬಿಡಿಎ ಅಧಿಕಾರಿಗಳ ಜೊತೆ ಸಭೆ ಮಾಡಿದ್ದೇನೆ. ಎಷ್ಟು ಜಾಗ ಇದೆ, ಎಷ್ಟು ಸೈಟ್ ಗಳನ್ನು ತಕ್ಷಣ ಕೊಡಬಹುದು, ಬಾಕಿ ಇರತಕ್ಕ ಅಪ್ಲಿಕೆಂಟ್ಸ್‌ಗೆ ಸೈಟ್ ಕೊಡುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಳ್ಳಬಹುದು ಎನ್ನುವ ಬಗ್ಗೆ ವಿವರವಾದ ವರದಿಯನ್ನು ಕೊಡಬೇಕೆಂದು ನಾನು ಬಿಡಿಎ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಸರ್ಕಾರ ಒಂದು ನಿರ್ಧಾರವನ್ನು ಇಲ್ಲಿ ಪ್ರಕಟ ಮಾಡಿತ್ತು, ರೆವಿನ್ಯೂ ಸೈಟ್‌ಗಳಲ್ಲಿ ಯಾರು ಯಾರು ಮನೆ ಕಟ್ಟಿದ್ದಾರೋ ಅವರನ್ನು ಕನ್‌ಫರ್ಮ್ ಮಾಡುತ್ತೇವೆ ಎಂದು ಹೇಳಿ. ಇಂತಹ ರೆವಿನ್ಯೂ ಸೈಟ್‌ಗಳು ಬಿಡಿಎ ವ್ಯಾಪ್ತಿಗೆ ಬಂದಿದ್ದರೆ, ಬಿಡಿಎ ಕನ್‌ಫರ್ಮ್ ಮಾಡುವುದಕ್ಕಿಂತ ಮುಂಚೆ ರೆವಿನ್ಯೂ ಸೈಟನ್ನು ಕನ್‌ಫರ್ಮ್ ಮಾಡಿ. ಬಿಡಿಎ ಅವರು ಅಕ್ವೈರ್ ಮಾಡಿಕೊಂಡರೆ ಅಂತಹ ಸಂದರ್ಭದಲ್ಲಿ ಸರ್ಕಾರ ಏನು ನಿರ್ಣಯ ಮಾಡುತ್ತದೆ ? ಇವತ್ತು ಬಿಡಿಎ ಅವರು ನಿವೇಶನ ಕೊಡುವುದು ಒಂದು ಭಾಗ. ಇವತ್ತು ಹೌಸಿಂಗ್ ಸೊಸೈಟಿಗಳ ಮೂಲಕ ನಿವೇಶನವನ್ನು ಕೊಟ್ಟಾಗ ಅವೆಲ್ಲಾ ಬಿಡಿಎ ವ್ಯಾಪ್ತಿಗೆ ಬರುತ್ತವೆ. ಆ ವ್ಯಾಪ್ತಿಯಲ್ಲಿ ಬರುವಂತಹದ್ದು ಲೆಜಿಸ್ಲೇಟರ್ಸ್ ಸೊಸೈಟಿಯೂ ಒಂದು. ಆ ಜಾಗದಲ್ಲಿ ನೀರು, ಒಳಚರಂಡಿ ಮುಂತಾದ ಸೌಕರ್ಯಗಳ ಬಗ್ಗೆ ವ್ಯವಸ್ಥೆ ಮಾಡತಕ್ಕ ಕಾಮಗಾರಿ ಕೆಲಸವನ್ನು ಬಿಡಿಎ ಮಾಡಬೇಕಾಗುತ್ತದೆ. ಇಂತಹ ಎಷ್ಟು ಯೂನಿಟ್‌ಗಳನ್ನು ಪೂರ್ಣಗೊಳಿಸಿ ಅವನ್ನು ಕಾರ್ಪೋರೇಷನ್‌ಗೆ ಹ್ಯಾಂಡ್ ಓವರ್ ಮಾಡಿದ್ದೀರಿ ? ಹಾಗೆ ಮಾಡದೇ ಇದ್ದರೆ ಅದಕ್ಕೆ ಕಾರಣ ಏನು ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ನೇರ ಸಂಬಂಧಪಡದೇ ಇದ್ದರೂ ವಿರೋಧ ಪಕ್ಷದ ನಾಯಕರು ಕೇಳಿರುವುದರಿಂದ, ಬಿಡಿಎ ಲ್ಯಾಂಡ್ ಅಕ್ವಿಸಿಷನ್ ವಿಚಾರದಲ್ಲಿ ಫೈನಲ್ ನೋಟಿಫಿಕೇಷನ್ ಮಾಡಿ ಯಾವ ಜಾಗ ನಮ್ಮ ಸ್ವಾಧೀನಕ್ಕೆ ಬಂದಿರುತ್ತದೆ ಅಲ್ಲಿ ಯಾರೇ ಹೋಗಿ ಮನೆ ಕಟ್ಟಿಕೊಂಡಿದ್ದರೆ ಅದನ್ನು ಕನ್‌ಫರ್ಮ್ ಮಾಡುವ ಪ್ರಶ್ನೆ ಬರುವುದಿಲ್ಲ. ಅದು ಲೀಗಲ್ ಕಾಂಪ್ಲಿಕೇಷನ್ ಬರುತ್ತದೆ. ಉಳಿದಿರತಕ್ಕ ಜಾಗ ಎಲ್ಲೆಲ್ಲಿ ರೆವಿನ್ಯು ಜಾಗ ಇದೆ ಅಲ್ಲಿ we have taken a decision to confirm the ownership on those people on certain conditions. ಕೊಡಬೇಕು ಎನ್ನತಕ್ಕದ್ದು. ಆ ಸಂದರ್ಭದಲ್ಲಿ ನಾವು ಕೆಲವು ಸಿವಿಕ್ ಅಮಿನಿಟೀಸ್ ಬಗ್ಗೆ ನೋಡಬೇಕಾಗುತ್ತದೆ. ಕೆಲವು ಭಾಗದಲ್ಲಿ ರೆವಿನ್ಯು ಸೈಟ್ ಮಾಡಿದ್ದು ಅಲ್ಲಿ ಒಂದು ಬಸ್ ಹೋದರೆ ಇನ್ನೊಂದು ಬಸ್ ಬರಲಾರದಷ್ಟು ಸಣ್ಣ ರಸ್ತೆ ಮಾಡಿರುತ್ತಾರೆ.

ಮತ್ತೆ ದೇವಸ್ಥಾನ, ಮಸೀದಿ, ಚರ್ಚ್ ಪಾರ್ಕ್ ಬಗ್ಗೆ ಜಾಗವೇ ಬಿಟ್ಟಿರುವುದಿಲ್ಲ. ಹಣದ ಆಸೆಯಿಂದ ಬರೀ ಸೈಟ್‌ಗಳನ್ನು ಮಾಡಿ ಮಾಡಿ ಹಂಚಿರುತ್ತಾರೆ. ಆದುದರಿಂದ ನಾವು ಕನ್‌ಫರ್ಮ್ ಮಾಡತಕ್ಕ ಸಂದರ್ಭ ಬಂದಾಗ ಇವನ್ನೆಲ್ಲಾ ಗಮನದಲ್ಲಿ ಇಟ್ಟು ಮಾಡಬೇಕೆಂದು ವಿಚಾರ ಮಾಡಿದ್ದೇವೆ. ಅದಕ್ಕಾಗೇ ಬಿಲ್ ಸಿದ್ಧವಾಗುತ್ತಿದ್ದು ಅದನ್ನು ಈ ಅಧಿವೇಶನದಲ್ಲೇ ತೆಗೆದುಕೊಂಡು ಬರುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಈಗ 86 ಸಾವಿರ ನಿವೇಶನಗಳಿಗೆ ಅರ್ಜಿಗಳು ಇದ್ದು ಆ ಜನರು ಠೇವಣಿ ಕೂಡ ಕಟ್ಟಿದ್ದಾರೆ. ಮತ್ತೆ ಕೆಲವು ವಿಷಯಗಳ ಬಗ್ಗೆ ಮಾಲೀಕರು ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದಿದ್ದಾರೆಂದು ಹೇಳುತ್ತಿದ್ದೀರಿ. ಈ ರೀತಿ ತಡೆಯಾಜ್ಞೆ ಬರದಿರುವ ರೀತಿಯಲ್ಲಿ ಈ ಸಭೆಯಲ್ಲಿ ಕಾಯ್ದೆ ತರುವುದಕ್ಕೆ ಯೋಚನೆ ಮಾಡಿದ್ದೀರಾ? ಯಾವ ಯಾವ ವಿಚಾರಗಳಲ್ಲಿ ತಡೆ ಸಿಗುತ್ತದೆಂದು ತಿಳಿದು ಆ ಬಗ್ಗೆ ತಿದ್ದುಪಡಿ ತರುವುದಕ್ಕೆ ಯೋಚನೆ ಮಾಡಿದ್ದೀರಾ? ಸೈಟ್‌ಗಳನ್ನು ಹಂಚುವ ಸಲುವಾಗಿ ತಾವು ಬಡಾವಣೆಗಳನ್ನು ಮಾಡುತ್ತೀರಿ. ಇವತ್ತು ಯಾವುದಾದರೂ ಒಂದು ಹೊಸ ಬಡವಾಣೆಯನ್ನೇ ಪ್ರತ್ಯೇಕವಾಗಿ ನಿರ್ಮಾಣ ಮಾಡುವ ಚಿಂತನೆ ಸರ್ಕಾರದಲ್ಲಿ ಇದೆಯೇ? ಇದ್ದರೆ ಎಲ್ಲಿ, ಯಾವ ಬಡಾವಣೆಯನ್ನು ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ ಎಂದು ಹೇಳಬೇಕು.

86 ಸಾವಿರ ಅರ್ಜಿಗಳನ್ನು ತಾವೇನು ತೆಗೆದುಕೊಂಡಿದ್ದೀರಿ ಅದರ ಬಗ್ಗೆ ಏನಾದರೂ ಒಂದು ಯೋಚನೆ ಮಾಡಬೇಕು. ಸಂಪೂರ್ಣವಾಗಿ ಎಲ್ಲರಿಗೂ ಸೈಟನ್ನು ಕೊಡತಕ್ಕ ವ್ಯವಸ್ಥೆ ಮಾಡುವುದಕ್ಕೆ ಒಂದು ಕ್ರಾಂತಿಕಾರಕವಾದ ಯೋಜನೆಯನ್ನು ಕೈಗೊಳ್ಳಬೇಕಾಗುತ್ತದೆ. ಈ ಯೋಜನೆಯನ್ನು ಜಾರಿಗೆ ತರುವುದಕ್ಕೆ ಸರ್ಕಾರದಲ್ಲಿ ಅದರ ಬಗ್ಗೆ ಒಂದು ವ್ಯವಸ್ಥಿತವಾದ ಚಿಂತನೆ ಇದೆಯೆ? ಅದರ ಬಗ್ಗೆ ತಮ್ಮನ್ನು ಪ್ರಶ್ನೆ ಮಾಡುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಆಸೆ, ಯಾರು ಠೇವಣಿ ಹಣವನ್ನು ಕಟ್ಟಿ ಅರ್ಜಿಯನ್ನು ಹಾಕಿದ್ದಾರೆ. ಅವರಿಗೆ ಸೈಟು ಕೊಡಬೇಕು ಎನ್ನತಕ್ಕದ್ದು ಇದೆ. ಇದಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮುಂದಾಗಬೇಕು. ಸೈಟು ಸಿಗುತ್ತದೆನ್ನುವ ಉದ್ದೇಶದಿಂದ ಜನರು ಅರ್ಜಿಗಳನ್ನು ಹಾಕಿಕೊಂಡಿದ್ದಾರೆ. ಹಣವನ್ನು ಡಿಪಾಸಿಟ್ ಮಾಡಿದ್ದಾರೆ. ಈಗ ನಿಮಗೆ ಸೈಟುಗಳನ್ನು ಕೊಡುವುದಕ್ಕಾಗುವುದಿಲ್ಲ. ನಿಮ್ಮ ಹಣ ವಾಪಸ್ಸು ತೆಗೆದುಕೊಂಡು ಹೋಗಿಯೆಂದು ಹೇಳತಕ್ಕದ್ದು ಸಾಧುವಲ್ಲ. ಹಾಗೆ ನಾವು ಹೇಳದಿದ್ದರೂ ಕೂಡ ಈಗಾಗಲೇ 3 ಕೋಟಿ ಚಿಲ್ಲರೆ ಹಣವನ್ನು ಕೆಲವು ಅರ್ಜಿದಾರರು ನಮಗೆ ಸೈಟುಗಳು ಬೇಡವೆಂದು ಹೇಳಿ ಡಿಪಾಸಿಟ್ ಹಣವನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಅವರು ಬೇಜಾರಾಗಿ ವಾಪಸ್ಸು ತೆಗೆದುಕೊಂಡಿರಬೇಕೆಂದು ನನ್ನ ಭಾವನೆ. ಆ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಉಳಿದಿರತಕ್ಕ ಅರ್ಜಿದಾರರು ಯಾರ್ಯಾರು ಇದ್ದಾರೆ ಅವರ ಠೇವಣಿ ಹಣ ಇನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿಯೇ ಇದೆ. ಅವರಿಗೆ ಸೈಟುಗಳನ್ನು ಕೊಡಬೇಕೆನ್ನುವ ಆಸೆಯಿಂದ ಇತ್ತೀಚಿನ ವಿವರಗಳನ್ನು ಒದಗಿಸಬೇಕೆಂದು ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ಜಾಗ ಈಗ ನಮ್ಮ ಹತ್ತಿರ ಎಷ್ಟಿದೆ, ಹೈಕೋರ್ಟ್ ತಡೆಯಾಜ್ಞೆಯಿಂದ ತೆರವಾದ ಭೂಮಿ ಸಹ ಸೇರಿಕೊಂಡು ಆ ಜಾಗದಲ್ಲಿ ಜನರಿಗೆ ಸೈಟು ಕೊಡಬೇಕೆನ್ನುವ ಉದ್ದೇಶವನ್ನು ನಾವು ಇಟ್ಟು ಕೊಂಡಿದ್ದೇವೆ. ಮತ್ತೊಂದು ಪ್ರಶ್ನೆಯನ್ನು ಸಹ ಕೇಳಿದ್ದಾರೆ. ಹೊಸ ಬಡಾವಣೆಗಳನ್ನು ಮಾಡುವುದಕ್ಕೆ ಸರ್ಕಾರ ಯೋಚಿಸಿದೆಯೇ ಎಂದು ಕೇಳಿದ್ದಾರೆ. ರಸ್ತೆಗಳನ್ನು ಮಾಡುವುದು, ಕುಡಿಯುವ ನೀರನ್ನು ಒದಗಿಸುವುದು ದೀಪ ಹಾಕಿಸುವುದು ಈ ಕೆಲಸಗಳಲ್ಲಿ ನಮಗೆ ಬಹಳಷ್ಟು ತೊಂದರೆಗಳಿವೆ. ಆದ್ದರಿಂದ ನಾವು ಅದಕ್ಕೆ

ಬೇರೆ ಯೋಚನೆಯನ್ನು ಮಾಡಿದ್ದೇವೆ. we have also thought over that matter. ಗ್ರೇಟರ್ ಬಾಂಬೆ ಆ ತರಹ ಸೆಟಲೇಟ್‌ಟೌನ್‌ಶಿಪ್ ಏನಾದರೂ ಮಾಡದಿದ್ದರೆ ನಮಗೆ ಕಷ್ಟವಾಗುತ್ತದೆ. ಇದರ ಬಗ್ಗೆ ಏನಾದರೂ ಮಾಡುವುದಕ್ಕೆ ಕನಕಪುರ ರಸ್ತೆಯಲ್ಲಿ ಮತ್ತೊಂದು ಕಡೆ ಈ ತರಹ ಮಾಡಲಿಕ್ಕೆ ಸ್ಥೂಲವಾಗಿ ಚರ್ಚೆ ಮಾಡಿದ್ದೇವೆ. ನಾವು ಅದರ ಬಗ್ಗೆ ವಿಚಾರ ಮಾಡುತ್ತೇವೆ. ಬೆಂಗಳೂರು ನಗರದಹಾಗೆ ಮತ್ತೊಂದು ಸಬರ್‌ಬನ್ ಟೌನ್‌ಶಿಪ್ ಮಾಡಬೇಕು ಅದನ್ನು ಬೆಳಸಬೇಕು. ನಾವು ಹೀಗೆ ಬೆಂಗಳೂರು ನಗರ ಬೆಳೆಯಲಿಕ್ಕೆ ಬಿಟ್ಟರೆ ಇನ್ನು ಮುಂದೆ ಯಾರೂ ಸರಿಪಡಿಸಲಾರದ ಕೆಲವು ಸಮಸ್ಯೆಗಳು ಬರುತ್ತವೆ ಎನ್ನತಕ್ಕ ವಿಚಾರವನ್ನು ಗಮನದಲ್ಲಿಟ್ಟು ನಾವು ಅದರ ಬಗ್ಗೆ ತೀರ್ಮಾನ ಮಾಡುತ್ತಿದ್ದೇವೆ. ಶೀಘ್ರವಾಗಿ ಅದರ ಬಗ್ಗೆ ತೀರ್ಮಾನ ಮಾಡುತ್ತೇವೆ. ಕೇಂದ್ರಸರ್ಕಾರದವರು ಕೆಲವು ಯೋಜನೆಗಳನ್ನು ಪ್ರಕಟ ಮಾಡಿದ್ದಾರೆ. ಅದಕ್ಕನುಗುಣವಾಗಿ ಜಪಾನ್ ದೇಶದವರು ಮುಂದೆ ಬಂದಿದ್ದಾರೆ. ಜಪಾನ್ ದೇಶದ ನೆರವಿನ ಜೊತೆಗೆ ಕೇಂದ್ರಸರ್ಕಾರದ ಹಣಕಾಸಿನ ಸಚಿವರು ದೊಡ್ಡ ಟೌನ್‌ಶಿಪ್‌ಗಳನ್ನು ತರಬೇಕೆನ್ನುವ ಉದ್ದೇಶದಿಂದ ಅವರು ಹೇಳಿದ್ದಾರೆ. to get those facilities. ಕೇಂದ್ರಸರ್ಕಾರದ ನೆರವಿನಿಂದ ಸಬರ್‌ಬನ್ ಟೌನ್‌ಶಿಫ್ ಮಾಡುವುದಕ್ಕೆ ಅದರ ಬಗ್ಗೆ ಶೀಘ್ರ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ ಕೇಂದ್ರ ಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾಡಲಿಕ್ಕೆ ಪ್ರಾರಂಭ ಮಾಡಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಬಹಳ ವಿನಯದಿಂದ ಹೇಳುತ್ತಿದ್ದೇನೆ. ಇನ್ನೊಂದು ಪ್ರಶ್ನೆಯ ಬಗ್ಗೆ ನನ್ನ ದೃಷ್ಟಿಯಲ್ಲಿ ಸರಿಯಾಗಿ ಅವರಿಗೆ ಬ್ರೀಫ್ ಆಗಿಲ್ಲ. 86 ಸಾವಿರ ಜನ ಅರ್ಜಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಜಾಹಿರಾತು ಕೊಟ್ಟಾಗ ಅರ್ಜಿಗಳನ್ನು ಹಾಕಿಕೊಂಡರು. 4500 ಸೈಟುಗಳು ಅಲ್ಲಿ ಇಲ್ಲ. ಲಾಟರಿ ಮೂಲಕ 2500 ಜನರಿಗೆ ಸೈಟುಗಳನ್ನು ಕೊಡಬೇಕಾಗಿತ್ತು. 86 ಸಾವಿರ ಜನ ಎಲ್ಲರಿಗೂ ಸೈಟು ಕೊಡಬೇಕಾಗಿರಲಿಲ್ಲ. ಅದನ್ನು ಸರಿಪಡಿಸಿಕೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ. ಸುಮಾರು ದಿವಸಗಳಿಂದ ಈ ಸಮಸ್ಯೆ ಪೆಂಡಿಂಗ್‌ನಲ್ಲಿದೆ. 1988ರಲ್ಲಿ ಜಾಹಿರಾತು ಮಾಡಿದ್ದಾರೆ. ಆಗ 86 ಸಾವಿರ ಅರ್ಜಿಗಳು ಬಂದವು. ಹಾಗಾಗಿ ಮುಖ್ಯಮಂತ್ರಿಗಳು 86 ಸಾವಿರ ಜನರಿಗೆ ಸೈಟುಗಳನ್ನು ಕೊಡಬೇಕಾಗಿದೆಯೆಂದು ಹೇಳುತ್ತಿದ್ದಾರೆ ಅದು ಸರಿಯಾದ ಉತ್ತರವಲ್ಲ. ಮತ್ತೊಂದು ಪ್ರಶ್ನೆಯನ್ನು ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ. ನಮ್ಮ ಕಾಲದಲ್ಲಿ ಏನಾಗಿತ್ತು ಅದನ್ನು ಹೇಳುತ್ತೇನೆ. ನಾವು ಲ್ಯಾಂಡ್ ಇಲ್ಲದೆ ಅಡ್ವರ್‌ಟೈಸ್ ಮಾಡುತ್ತೇವೆ. ನಮ್ಮ ಕಡೆ ಲ್ಯಾಂಡ್ ಇರುವುದಿಲ್ಲ. ಲ್ಯಾಂಡ್ ನಮ್ಮ ಪೊಸಿಷನ್‌ನಲ್ಲಿರುವುದಿಲ್ಲ. ಹಣ ಬರುತ್ತದೆಂದು ನಾವು ಅಡ್ವರ್‌ಟೈಸ್ ಮಾಡುತ್ತೇವೆ ಡಿಪಾಸಿಟ್ ತೆಗೆದುಕೊಳ್ಳುತ್ತೇವೆ. ಸುಮ್ಮನೆ ಅಪ್ಲಿಕೇಶನ್ ಕಾಲ್‌ಫಾರ್ ಮಾಡುತ್ತೇವೆ. without possesson of the land we have advertised. ಇನ್ನು ಮುಂದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸೈಟುಗಳಿಗೆ ಅಡ್ವರ್‌ಟೈಸ್ ಮಾಡುವುದಕ್ಕೆ ಮುಂಚೆ they should not advertise without having the land in their possession. ನಿರ್ದಿಷ್ಟವಾದ ಸಮಯದಲ್ಲಿ ಸೈಟುಗಳನ್ನು ಕೊಡಬೇಕು ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. 6 ತಿಂಗಳು 8 ತಿಂಗಳು ಅಥವಾ 1 ವರ್ಷದಲ್ಲಿ ಸೈಟುಗಳನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಅವರು ಕೊಟ್ಟ ಹಣಕ್ಕೆ ಬಡ್ಡಿಯನ್ನು ಕೊಡಬೇಕಾಗುತ್ತದೆ. ಸೈಟುಗಳನ್ನು ಕೊಡಲಿಕ್ಕೆ ಆಗಲಿಲ್ಲವೆಂದರೆ ಹಣವನ್ನು ರೀಫಂಡ್ ಮಾಡಬೇಕು. ರೀಫಂಡ್ ಮಾಡದಿದ್ದರೆ ಆ ಹಣಕ್ಕೆ ಬಡ್ಡಿಯನ್ನು ಕೊಡುತ್ತೀರಾ ? ಇವತ್ತು ಬೆಂಗಳೂರು ನಗರದಲ್ಲಿ ಸಾವಿರಾರು ಜನರಿಗೆ ಸೈಟು ಬೇಕಾಗಿದೆ. ಅದರ ನಿರ್ದಿಷ್ಟವಾದ ಸಂಖ್ಯೆ ಇಲ್ಲ. ಎಷ್ಟು ಜನರಿಗೆ

ಸೈಟು ಬೇಕಾಗಿದೆ ಅದರ ಬಗ್ಗೆ ತಾವು ಸರ್ವೆ ಮಾಡಿಸುತ್ತೀರಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಎಷ್ಟು ಜನಕ್ಕೆ ಸೈಟುಗಳು ಬೇಕು ಎನ್ನತಕ್ಕಂಥ ಸರ್ವೆ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಅದೂ ಕೂಡ ಬಹಳ ದೊಡ್ಡ ಕಾರ್ಯಕ್ರಮ ಆಗುತ್ತದೆ ಎಂದು ನಾನು ಭಾವಿಸಿದ್ದೇನೆ. ಮಾಡಬಾರದು ಎಂದು ನಾನು ಹೇಳುತ್ತಿಲ್ಲ. ಏಕೆಂದರೆ ದಿನನಿತ್ಯ ಸಾವಿರಾರು ಜನ ಬೆಂಗಳೂರಿನಲ್ಲಿ ಬಂದು ಸೆಟ್ಲ್ ಆಗತಕ್ಕಂಥಾದ್ದು ಇದೆ.

ಅಧ್ಯಕ್ಷರು : ಇದು ಸೆನ್ಸಸ್ ಮಾಡಿದಹಾಗೆ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ಹೌದು. ಅದಕ್ಕೋಸ್ಕರ ನಾವು ಮಾಡುತ್ತೇವೆ, ಆದರೆ ನಮ್ಮ ಸೆನ್ಸಸ್ ಸರಿಯಾಗುವುದಿಲ್ಲ, ತಮಗೆ ಗೊತ್ತಿದೆ, ಈ ಸಂಖ್ಯೆ ದಿನನಿತ್ಯ ಬಂದು ಆಡ್ ಆಗುತ್ತಿದೆ. ಕಾರಣ, ಏನು, ಎಲ್ಲಿಂದ ಎಂದು ವಿವರಕ್ಕೆ ಹೋದಷ್ಟು ಕೂಡ ಈ ಸಮಸ್ಯೆಯ ಆಗಾಧತೆ ಕೂಡ ದೊಡ್ಡದಾಗುತ್ತಲೇ ಹೋಗುತ್ತದೆ. ಪರಿಸ್ಥಿತಿ ಅಲ್ಲಿಗೆ ಬಂದು ನಿಂತುಕೊಂಡುಬಿಟ್ಟಿದೆ. ಉತ್ತರ ಭಾರತದಿಂದ ಬಂದು ಜನ ಸೇರುತ್ತಿದ್ದಾರೆ, ಗ್ರಾಮಾಂತರ ಪ್ರದೇಶಗಳಿಂದ ಬಂದು ಜನ ಸೇರುತ್ತಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಬಡ ಜನರಿಗೆ ಸೈಟುಗಳನ್ನು ಕೊಡುವ ಬಗ್ಗೆ, ಅದರ ಪ್ರಕಾರ ಪಟ್ಟಣ ಪ್ರದೇಶದಲ್ಲೂ ಬಡ ಜನ ಇದ್ದಾರೆ. ಅವರ ಬಗ್ಗೆಯೂ ಸರ್ವೆ ಸರ್ಕಾರದಲ್ಲಿ ಇರಬೇಕಲ್ಲ? ಅದು ಈಗಾಗಲೇ ಒಂದು ಹಳೆಯ ಸರ್ವೆ ಇದೆ. 1ಲಕ್ಷ 62 ಸಾವಿರ ಎಂದು ಇಡೀ ಕರ್ನಾಟಕ ರಾಜ್ಯದ್ದು ಹಳೆಯ ಸರ್ವೆ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ತಾವು ಯಾವ ಪ್ರಕಾರ ಸರ್ವೆ ಮಾಡುತ್ತೀರಿ, ಎಷ್ಟು ಜನಕ್ಕೆ ನಿವೇಶನ ಬೇಕಾಗಿದೆಯೆಂದು. ಅದೇಪ್ರಕಾರ ರಾಜ್ಯದ ಪಟ್ಟಣ ಪ್ರದೇಶಗಳಲ್ಲಿ ಏನು ಬಡಜನ ಇದ್ದಾರೆ, ಇವರ ಬಗ್ಗೆಯೂ ಸರ್ವೆ ಬೇಕಾಗುತ್ತದೆ. 1 ಲಕ್ಷ 62 ಸಾವಿರ ಜನ ಇದ್ದಾರೆ ಎಂದು. ಈಗಾಗಲೇ ತಮ್ಮ ಕಡೆ ಹಳೆಯ ರೆಕಾರ್ಡ್ ಇದೆ. ಅವರಲ್ಲಿ 60 ಸಾವಿರ ಜನರಿಗೆ ಕೊಟ್ಟಿದ್ದಾರೆ ಎಂದು ಇದೆ. ನಾನು ಇವತ್ತು ಕೇಳುತ್ತಿದ್ದೇನೆ ಕರ್ನಾಟಕ ರಾಜ್ಯದ ಪಟ್ಟಣ ಪ್ರದೇಶಗಳಲ್ಲಿ ಎಷ್ಟು ಬಡಜನರಿಗೆ ನಿವೇಶನ ಬೇಕಾಗಿದೆ? ಇದರ ಬಗ್ಗೆ ಸರ್ವೆ ಮಾಡಿ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಈಗ ಇರತಕ್ಕಂಥ ನಿವೇಶನ ರಹಿತರಿಗೆ ನಿವೇಶನ ಕೊಡದೇ ಇರತಕ್ಕಂಥ ಸಮಸ್ಯೆ ಒಂದಾದರೆ, ಒಟ್ಟು ಎಷ್ಟು ಜನಕ್ಕೆ ಸೈಟುಗಳು ಇಲ್ಲವೆಂದು ಸೆನ್ಸಸ್ ತೆಗೆಯುವುದು ಮತ್ತೊಂದು ಪ್ರಶ್ನೆ. ಈ ಪ್ರಶ್ನೆ ಒಂದಕ್ಕೊಂದು ಪೂರಕವಾಗಿದೆ, ಇಲ್ಲವೆಂದು ನಾನು ಹೇಳುವುದಿಲ್ಲ. ನಿಮ್ಮ ಪ್ರಶ್ನೆಯನ್ನು ನಾನು ಅಲ್ಲಗೆಳೆಯುತ್ತಿಲ್ಲ, ಆದರೆ ಇದು ಎಷ್ಟು ಮಾಡಿದರೂ ಕೂಡ ಪಕ್ಕಾ ಆಗುವುದಿಲ್ಲ ಎಂಬ ಯೋಚನೆ ನಮಗೆ ಬಂದಿದೆ.

ಹಾಗೆಂದು ಸುಮ್ಮನೆ ಕುಳಿತುಕೊಳ್ಳುವುದಕ್ಕೂ ಬರುವುದಿಲ್ಲ. ಈ ಮಧ್ಯ ಇಕ್ಕಟ್ಟಿನಲ್ಲಿ ನಾವು ಸಿಕ್ಕಿಹಾಕಿಕೊಂಡಿದ್ದೇವೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಏನು ಸರ್ವೆ ಮಾಡುತ್ತೇವೆ, ಹಾಗೇಯೇ ಇಲ್ಲಿಯೂ ಕೂಡ ಮಾಡಬೇಕೆಂಬ ವಿಷಯ. ಗ್ರಾಮಾಂತರ ಪ್ರದೇಶಗಳಲ್ಲಾದರೆ, ಬೆಳಿಗ್ಗೆ ಹೋಗಿ ಸಾಯಂಕಾಲ ಲೆಕ್ಕ ತೆಗೆದುಕೊಂಡು ಬಂದುಬಿಡಬಹುದು. ಆದರೆ ಪಟ್ಟಣ ಪ್ರದೇಶಗಳಲ್ಲಿ ಇದನ್ನು ಮಾಡತಕ್ಕದ್ದು ಅಷ್ಟು ಸುಲಭ ಅಲ್ಲ. ಒಂದು ಕಡೆ ಮಾಡ್ತಿದ್ರೆ, ಇನ್ನೊಂದು ಕಡೆ ಗುಡಿಸಲುಗಳನ್ನು ಕಟ್ಟುತ್ತಲೇ ಇರುತ್ತಾರೆ.

ಯಾರು, ಎಲ್ಲಿಂದ ಬಂದ್ರು ಎಂದು ಗೊತ್ತಾಗುವುದಿಲ್ಲ. ರೆವಿನ್ಯೂ ಜಾಗದಲ್ಲಿ ಕೂಡ ಇದನ್ನು ಮಾಡಿ ಮುಗಿಸುವಂಥಾದ್ದಲ್ಲ. ಅದು ಈ ಶತಮಾನದಲ್ಲಿ ಕೂಡ ಮುಗಿಯುವುದಿಲ್ಲ..

ಶ್ರೀ ವಾಟಾಳ್ ನಾಗರಾಜ್ : ಶತಮಾನ ಕಳೆದರೂ ಕೂಡ ನೀವು ನಿವೇಶನ ಕೊಡುವುದಕ್ಕೆ ಆಗುವುದಿಲ್ಲ ಎಂದು ನನಗನ್ನಿಸುತ್ತದೆ. ಇದನ್ನು ಕೊಟ್ಟನೆ ನೀವು ದೊಡ್ಡ ಯಾಗ ಮಾಡಿದಹಾಗೆ.

ಶ್ರೀ ಎಸ್. ಬಂಗಾರಪ್ಪ : ಆನಂತರ 85-86 ಸಾವಿರ ಚಿಲ್ಲರೆ ಜನಕ್ಕೆ ಸೈಟುಗಳನ್ನು ಕೊಡಬೇಕು ಎಂಬುದು. ಅಂದರೆ ಅಲ್ಲಿಗೆ ಹೆಚ್ಚುಕಡಿಮೆ ಅಷ್ಟು ಜನ ಸೈಟ್‌ಲೆಸ್ ಜನ ಇದ್ದಾರೆ ಎಂದು ನಮಗೆ ಅರ್ಥವಾಗುತ್ತದೆ. ಇದಕ್ಕೆ ಏನಾದರೂ ಮಾಡಬೇಕು ಎಂದರೆ, ನಾವು ಸೈಟುಗಳನ್ನು ತೆಗೆದುಕೊಂಡು ಹೋಗಬೇಕು. ತಾವು ಹೇಳಿದಿರಿ ಜಾಗ ರೆಡಿ ಮಾಡಿಕೊಂಡು ಅಪ್ಲಿಕೇಶನ್ಸ್ ಕರೆಯುವುದು ಒಳ್ಳೆಯದು ಎಂದು. ನಾವು ಇದನ್ನು ಮಾಡಬೇಕಾದರೆ ಹಣರೆಡಿ ಮಾಡಿಕೊಂಡು, ಜಾಗ ಅಕ್ವೈರ್ ಮಾಡಿಕೊಂಡು ಹೋಗಬೇಕಾಗುತ್ತದೆ. ಈ ಯೋಚನೆ ಆ ಕಾಲದಲ್ಲಿ ಏಕೆ ಮಾಡಿದ್ದಾರೆ ಎಂದರೆ, ಹಣ ಏನು ಬರುತ್ತದೆ, ಆ ಹಣದಿಂದಲೇ ಜಾಗ ತೆಗೆದುಕೊಂಡು ಆಮೇಲೆ ಸೈಟು ಕೊಡಬೇಕೆನ್ನುವ ಯೋಚನೆಯಿಂದ ಮಾಡಿದ್ದಾರೆ. ಆದ್ದರಿಂದ ಅದರಲ್ಲಿ ಅರ್ಥ ಇದೆ. ಅದು ತಪ್ಪು ಎನ್ನತಕ್ಕಂಥ ದೃಷ್ಟಿಯಿಂದ ಅಲ್ಲ. ಅದೇನೇ ಇರಲಿ, ಈಗ ಇರತಕ್ಕಂಥವರಿಗೆ ಕೊಟ್ಟು ಉಳಿದವರಿಗೆ ಜೀರೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಅಧ್ಯಕ್ಷರು : ಶ್ರೀ ಬಸವರಾಜ ಪಾಟೀಲ್ ಅಟ್ಟೂರ್‌ರವೇ, ನಿಮ್ಮ ಪ್ರಶ್ನೆ: 2633ಕ್ಕೆ ಟೈಮ್ ಬೇಕು ಎಂದು ಕೇಳಿದ್ದಾರೆ. ಎರಡು ವಾರಗಳ ಟೈಮ್ ಕೇಳಿದ್ದಾರೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆಗಳನ್ನು ಏನು ಕೇಳುತ್ತೇನೆ, ಅವುಗಳಿಗೆ ಯಾವಾಗಲೂ ಸಮಯಕ್ಕೆ ಸರಿಯಾಗಿ ಉತ್ತರ ಬರುತ್ತಿಲ್ಲ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರಗಳಾಗಲೀ, ಮಹತ್ವಪೂರ್ಣವಾದಂಥ ವಿಚಾರಗಳಾಗಲೀ, ಅವುಗಳನ್ನು ಕೇಳಿದಂಥ ಸಂದರ್ಭದಲ್ಲಿ ಇಲ್ಲಿ ಎಲ್.ಎ. ಪ್ರಶ್ನೆಗಳೂ ಬರುವುದಿಲ್ಲ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಯಾಗಿಯೂ ಉತ್ತರ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಅತಿ ಶೀಘ್ರವಾಗಿ ಕಳುಹಿಸಿ ಉತ್ತರ ತರಿಸತಕ್ಕ ಪ್ರಯತ್ನ ಮಾಡುತ್ತೇವೆ. ಅದು ಶೀಘ್ರವಾಗಿ ಮುಂಚೆಯೇ ಬಂದರೆ, ಅದನ್ನು ತಮಗೆ ಕಳಿಸಿ ಕೊಟ್ಟುಬಿಡುತ್ತೇವೆ.

ರಾಜ್ಯದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾದವರ ಸಂಖ್ಯೆ.

2705 - ಶ್ರೀ ಪಿ.ಜಿ. ವಿಶ್ವನಾಥ್ (ಕೆ.ಆರ್. ನಗರ) : ಮಾನ್ಯ ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾದವರ ಒಟ್ಟು ಸಂಖ್ಯೆ ಎಷ್ಟು ? ಇವರುಗಳು ಯಾವ ಯಾವ ಬಂಧೀಖಾನೆಯಲ್ಲಿ ಇರುವರು ಮತ್ತು ಅವರ ಸಂಖ್ಯೆ ಎಷ್ಟು ?

ಆ) ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಖೈದಿಗಳಲ್ಲಿ ಹತ್ತು ವರ್ಷಗಳನ್ನು ಕಳೆದಿರುವರ ಸಂಖ್ಯೆ ಎಷ್ಟು? ಅವರಲ್ಲಿ ಎಷ್ಟು ಜನ ಉತ್ತಮ ನಡತೆಗಾಗಿ ಬಿಡುಗಡೆ ಹೊಂದಲು ವಿನಂತಿಯನ್ನು ಸರ್ಕಾರಕ್ಕೆ ಮಾಡಿಕೊಂಡಿದ್ದಾರೆ?